**ದಿನಾಂಕ 17.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಶ್ರೀ ಎಂ.ಆರ್.ಕೆ. ಪ್ರತಿವಾದಿ ಪರ ವಕೀಲರಿಂದಃ**

ನಿಪಿ-2ರ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಯಾವೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ವಾದಿ, ಪ್ರತಿವಾದಿಗಳ ನಡುವೆ ಮಾತುಕತೆ ಆಗಿರುತ್ತದೆ. ಸದರಿ ಮಾತುಕತೆಯ ಸಮಯದಲ್ಲಿ ನಾನು ಇರಲಿಲ್ಲ. ಸದರಿ ಮಾತುಕತೆಯ ಸಮಯದಲ್ಲಿ ಯಾವುದಾದರೂ ದಾಖಲಾತಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ವೀರಶೆಟ್ಟಿರವರ ಮಗ ಮಾದಶೆಟ್ಟಿ ಎಂದು ಹೇಳಲಾಗುವ ವ್ಯಕ್ತಿಗೆ ಬೇರೆ ಪಿತ್ರಾರ್ಜಿತ ಆಸ್ತಿಗಳು ಇದ್ದವು. ಸದರಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವೀರಶೆಟ್ಟಿರವರ ಮಗ ಮಾದಶೆಟ್ಟಿ ಎಂದು ಹೇಳಲಾಗುವ ವ್ಯಕ್ತಿಗೆ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂಬುದರ ಬಗ್ಗೆಯೂ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಆಜು ಬಾಜಿನಲ್ಲಿ ಪ್ರತಿವಾದಿಗಳಿಗೆ ಸೇರಿದ ಯಾವುದೇ ಸ್ವತ್ತು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಅಳತೆ ಅಡಿ ಲೆಕ್ಕದಲ್ಲಿ ಇರುವ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಪತ್ರದಲ್ಲಿ ದಾವಾ ಆಸ್ತಿಗಳು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಎಷ್ಟು ಆಸ್ತಿಗಳನ್ನು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಬಿ ಆಸ್ತಿಯ ಉಳಿಕೆ ಆಸ್ತಿಯು ನನ್ನ ಗಂಡನ ಹೆಸರಿನಲ್ಲಿ ಅಥವಾ ಅವರ ತಂದೆಯ ಹೆಸರಿನಲ್ಲಿ ಇತ್ತೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಎ ಆಸ್ತಿಯ ಯಾವ ದಿಕ್ಕಿಗೆ ದಾವಾ ಬಿ ಆಸ್ತಿ ಬರುತ್ತದೆ ಎಂದು ನಮೂದಿಸಲು ಯಾವುದಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನನ್ನ ಗಂಡನವರು ಬರೆಯಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ಗಂಡನವರ ಜೀವಿತ ಕಾಲದಲ್ಲಿ ನಾನು ಅವರನ್ನು ಕೇಳಿರುವುದಿಲ್ಲ. ದಾವೆಯನ್ನು ಸಲ್ಲಿಸಿರುವ ವಿಚಾರವನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರವನ್ನು ನನ್ನ ಗಂಡ ನನಗೆ ಹೇಳಿರುವುದಿಲ್ಲ.

ನಿಪಿ-3 ರ ಕ್ರಯಪತ್ರವನ್ನು ಪ್ರಶ್ನಿಸಿ ಯಾವುದೇ ದೂರು, ಮನವಿ ಅಥವಾ ದಾವೆ ದಾಖಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3ರ ಕಾಲದಲ್ಲಿ ಸದರಿ ದಾಖಲೆಯ ಪಕ್ಷಗಾರರ ನಡುವೆ ಯಾವೆಲ್ಲಾ ವ್ಯವಹಾರ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಆಸ್ತಿಯು ಭಾಗವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3ರಲ್ಲಿರುವ ಆಸ್ತಿಯನ್ನು ಕೋರಿ ನನ್ನ ಮಾವ ಯಾವುದಾದರೂ ದಾವೆ ಸಲ್ಲಿಸಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 08.01.1986ರ ಪೂರ್ವದಲ್ಲಿ ನನ್ನ ಮಾವನವರು ನಿಪಿ-3ರ ಆಸ್ತಿಯನ್ನು ಬಿಡಿಸಿ ಕೊಡುವಂತೆ ಯಾವುದಾದರೂ ದಾವೆ ಸಲ್ಲಿಸಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ರಲ್ಲಿರುವ ಸ್ವತ್ತಿನ ವಿವರಗಳು ಬೇರೆ ಬೇರೆಯಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-7ರ ದೂರಿನಲ್ಲಿ ನಿಪಿ-2 ಮತ್ತು 3ರ ಕ್ರಯಪತ್ರಗಳ ಬಗ್ಗೆ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-7ರಲ್ಲಿ ನಮೂದಿಸಿರುವ ಆಸ್ತಿಯ ವಿವರ ನಿಪಿ-2 ಮತ್ತು 3 ರಂತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹೊಂಡರಬಾಳು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಆಸ್ತಿಯಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ.

ಸದರಿ ಮನೆಯಲ್ಲಿ ನಾನು ಮತ್ತು ನನ್ನ ಗಂಡ 13 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ. ನಿಪಿ-1 ರಿಂದ 3 ರಲ್ಲಿರುವ ಆಸ್ತಿಗೂ ಮತ್ತು ನಾವು ವಾಸ ಮಾಡುತ್ತಿರುವ ಮನೆಗೂ ಸುಮಾರು 2 ಕಿ.ಮೀ. ಅಂತರ ಇರುತ್ತದೆ. ನಿಪಿ-1 ಮತ್ತು 2 ರ ಕ್ರಯಪತ್ರಗಳಲ್ಲಿ ಸದರಿ ಆಸ್ತಿಯನ್ನು 1892 ರಲ್ಲಿ ಮಾರಾಟ ಮಾಡಿರುವ ಒಕ್ಕಣೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1892ರ ಪತ್ರವನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಮ್ಮ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಿಪಿ-7ರ ನಂತರ ನನ್ನ ಗಂಡ ಮೇಲಾಧಿಕಾರಿಗಳಿಗೆ ದೂರು ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ಮತ್ತು 2 ರ ಕ್ರಯಪತ್ರಗಳಿಗೂ, ನಮಗೂ ಹಾಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ರ ಕ್ರಯಪತ್ರಕ್ಕೂ, ನಮಗೂ ಹಾಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಬದುಕಿದ್ದ ಕಾಲದಲ್ಲಿ ನಿಪಿ-1 ಮತ್ತು 2 ನ್ನು ಅನುಸರಿಸಿ ದಾಖಲೆ ಮಾಡಿಸಿಕೊಳ್ಳಲು ಯಾವುದಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-3ರಲ್ಲಿರುವ ಸ್ವತ್ತಿನ ಸಂಖ್ಯೆ 03/13 ರ ಆಸ್ತಿಗೂ, ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿರುವ ಆಸ್ತಿಯು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನಿಪಿ-1 ಮತ್ತು 2 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-6 ರಿಂದ 9ರ ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಿನಾಂಕ 07.01.1986 ರ ಕ್ರಯಪತ್ರವನ್ನು ಅನುಸರಿಸಿ ತಮ್ಮ ಆಸ್ತಿಯಲ್ಲಿ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ, ನಮಗೂ ಯಾವುದೇ ಸಂಬಂಧ ಇಲ್ಲದೇ ಇರುವುದರಿಂದ ಪ್ರತಿವಾದಿಗಳಿಂದ ನಮಗೆ ಯಾವುದೇ ಆಸ್ತಿಯ ಸ್ವಾಧೀನ ಬರಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ.

(Note: ಸಾಕ್ಷಿಯು ಪ್ರತಿ ಪ್ರಶ್ನೆಗೆ ಉತ್ತರ ನೀಡದೇ ಗೊತ್ತಿಲ್ಲ ಎಂದು ನುಡಿದಿರುತ್ತಾರೆ)

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ